ಓ.ಎಸ್.ನಂ.100/2022

ಪಿ ಡಬ್ಲ್ಯೂಃ 1

ದಿನಾಂಕ 20.06.2026 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಗಳ ಪರ ವಕೀಲರಿಂದಃ**

ಓ ಎಸ್ ನಂ 86/2018 ರ ದಾವೆಯಲ್ಲಿ ನಾನು 5 ನೇ ಪ್ರತಿವಾದಿಯಾಗಿರುತ್ತೇನೆ ಎಂದರೆ ಸರಿ. ಸದರಿ ಪ್ರಕರಣದ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಸದರಿ ಪ್ರಕರಣವು ಇನ್ನೂ ಚಾಲ್ತಿಯಲ್ಲಿದೆ ಎಂದರೆ ನನಗೆ ಮಾಹಿತಿ ಇಲ್ಲ. ಪ್ರತಿವಾದಿಗಳು ಕಾಕೋಳದ ಖಾಯಂ ನಿವಾಸಿಗಳು ಎಂದರೆ ಸರಿಯಲ್ಲ. ಸದರಿ ಪ್ರತಿವಾದಿಗಳು ಎಲ್ಲಿ ವಾಸ ಇರುತ್ತಾರೆ ಎಂಬ ಪ್ರಶ್ನೆ ಕೇಳಿದ್ದು ಸಾಕ್ಷಿ ಯಾವುದೇ ಉತ್ತರ ನೀಡಿರುವುದಿಲ್ಲ. ಸದರಿ ಪ್ರತಿವಾದಿಗಳಿಗೆ ಕುರಿತ ಶಾಲಾ, ಪಡಿತರ ಮತ್ತು ಗುರುತಿನ ಚೀಟಿಗಳು ಕಾಕೋಳ ವಿಳಾಸದಲ್ಲಿ ಮತ್ತು 1 ನೇ ವಾದಿಯ ಹೆಸರಿನಲ್ಲಿ ಇವೆ ಎಂದರೆ ಸರಿಯಲ್ಲ.

**2.** ಓ ಎಸ್ ನಂ 86/2018 ರ ದಾವೆಯ ನಂತರ ನಮ್ಮ ಮತ್ತು ಪ್ರತಿವಾದಿಗಳ ನಡುವ ಮನಸ್ತಾಪ ಉಂಟಾಗಿರುತ್ತದೆ. ಆ ಪೂರ್ವದಲ್ಲಿ ಯಾವುದೇ ವಿವಾದ ಇರುವುದಿಲ್ಲ ಎಂದರೆ ಸಾಕ್ಷಿಯು ಪ್ರತಿವಾದಿಗಳು ನಮಗೆ ಯಾರು ಎಂದು ಗೊತ್ತಿರಲಿಲ್ಲ ಎಂದು ನುಡಿಯುತ್ತಾರೆ. ಆಸ್ತಿ ಸಂಖ್ಯೆ 758/ಬಿ ನನ್ನ ಹೆಸರಿನಲ್ಲಿ ಇರುತ್ತದೆ. ನನ್ನ ತಂದೆಯ ಮೂಲಕ ನನ್ನ ಹೆಸರಿಗೆ ಬಂದಿರುತ್ತದೆ. 2 ನೇ ವಾದಿಯ ವಿವಾಹವು 1 ನೇ ವಾದಿಯ ಜೊತೆ ಆಗಿರುವ ಕುರಿತು ನಾನು ವಾದ ಪತ್ರದಲ್ಲಿ ಬರೆಸಿರುವುದಿಲ್ಲ. ದಾವಾ ಆಸ್ತಿಯಲ್ಲಿ ನಾವು ಮತ್ತು ಪ್ರತಿವಾದಿಗಳು ಜಂಟಿ ಕಬ್ಜಾದಲ್ಲಿ ಇರುತ್ತೇವೆ ಎಂದರೆ ಸರಿಯಲ್ಲ.

**3.** ದಾವಾ 1 ನೇ ಆಸ್ತಿಯು ನನ್ನ ಮತ್ತು ನನ್ನ ತಮ್ಮ ರಮೇಶರವರ ಜಂಟಿ ಹೆಸರಿನಲ್ಲಿ ಇರುತ್ತದೆ. ದಾವಾ 2 ನೇ ಆಸ್ತಿಯು ನನ್ನ ಹೆಸರಿನಲ್ಲಿ ಇರುತ್ತದೆ. ಸದರಿ ಆಸ್ತಿಗಳು ಯಾವ ವರ್ಷ ನನ್ನ ಹೆಸರಿಗೆ ವರ್ಗಾವಣೆಯಾಗಿರುತ್ತವೆ ಎಂದು ನನಗೆ ನೆನಪಿಲ್ಲ. ಆ ಕುರಿತು ನಾನು ಯಾವುದೇ ದಾಖಲೆಗಳನ್ನು ನೋಡಿರುವುದಿಲ್ಲ. ಪ್ರತಿವಾದಿಗಳು ಸದರಿ ಆಸ್ತಿಯಲ್ಲಿ ಹಿಸ್ಸಾ ಕೇಳಿದ ನಂತರ ಸದರಿ ಆಸ್ತಿಗಳನ್ನು ನನ್ನ ಹೆಸರಿಗೆ ವರ್ಗಾಯಿಸಲಾಗಿರುತ್ತದೆ ಎಂದರೆ ಸರಿಯಲ್ಲ. ಪ್ರತಿವಾದಿಗಳ ಹಿಸ್ಸಾ ಮತ್ತು ಸಾಮೂಹಿಕ ಕಬ್ಜಾ ತಪ್ಪಿಸುವ ಉದ್ದೇಶದಿಂದ ಸುಳ್ಳು ದಾವೆ ಹೂಡಿರುತ್ತೇನೆ ಎಂದರೆ ಸರಿಯಲ್ಲ.

**4.** ದಾವಾ ಆಸ್ತಿಯಲ್ಲಿ 1 ನೇ ವಾದಿ ಮತ್ತು ಪ್ರತಿವಾದಿಗಳು ಜಂಟಿ ಕಬ್ಜಾ ಹೊಂದಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ 2 ರಿಂದ 6 ನೇ ವಾದಿಗಳಿಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳು 1 ನೇ ವಾದಿಯ ಮೊದಲ ಹೆಂಡತಿ ಮತ್ತು ಮಕ್ಕಳು ಎಂದು

ತಿಳಿದಿದ್ದರೂ ಸಹ ಸುಳ್ಳು ದಾವೆ ಹೂಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ತೆ.ನ್ಯಾದಲ್ಲಿ ಬೆ.ಮಾಡಲಾಯಿತು.

ನನ್ನ ಸಮಕ್ಷಮ

Sd/-

ಓ ಹೇ ಕೆ ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.